**ಎಸ್ ಸಿ ನಂ.118/2019 ಪಿಡಬ್ಲ್ಯೂ6**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.01.2026**

**ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

1. ಎಸ್ ಸಿ ನಂ.82/2017 ರಲ್ಲಿ ನಾನು 5 ನೇ ಆರೋಪಿ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಮೇಲೆ ಇರುವ ಆರೋಪ ಏನು ಎಂದು ತಿಳಿಸುವ ದೋಷಾರೋಪಣಾ ಪಟ್ಟಿಯನ್ನು ನನಗೆ ನೀಡಲಾಗಿದೆ ಎಂದರೆ ಸರಿ. ಅದನ್ನು ನಾನು ಓದಿ ತಿಳಿದುಕೊಂಡಿದ್ದೇನೆಂದರೆ ಸರಿಯಲ್ಲ. ಅದನ್ನು ನಾನು ಓದಿ ತಿಳಿದುಕೊಂಡ ಮೇಲೆ ಆ ಪ್ರಕರಣದಲ್ಲಿ ನಮ್ಮ ವಕೀಲರನ್ನು ನೇಮಿಸಿಕೊಂಡಿದ್ದೇನೆಂದರೆ ಸಾಕ್ಷಿ, ವಕೀಲರನ್ನು ನೇಮಿಸಿಕೊಂಡಿದ್ದೇನೆ ಆದರೆ ಅದನ್ನು ಓದಿ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಈ ಪ್ರಕರಣದ ಆರೋಪಿ-1, 2 ಮತ್ತು 10 ನೇ ಆರೋಪಿಗಳು ನನ್ನ ವಿರುದ್ಧ ಸಾಕ್ಷಿ ಹೇಳಿದ್ದನ್ನು ಕೇಳಿದ್ದೇನೆಂದರೆ ಸರಿ. ಆ ಪ್ರಕರಣದಲ್ಲಿ ನಮ್ಮ ವಕೀಲರಿಗೆ ಅರಳೀಕಟ್ಟೆಯ ಬಳಿ ನಡೆದ ಘಟನೆಯ ಬಗ್ಗೆ ಮಾಹಿತಿ ನೀಡಿದ್ದೇನೆಂದರೆ ಸಾಕ್ಷಿ, ನನ್ನ ಅಣ್ಣ ಚಾಸಾ.1 ಮಾಹಿತಿ ನೀಡಿದ್ದಾರೆ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ನಮ್ಮ ಮೇಲೆ ನ್ಯಾಯಾಲಯ ಯಾವ ಆಪಾದನೆಗಳನ್ನು ಹೊರಿಸಿದೆ ಎಂದು ಕೇಳಿ ತಿಳಿದಿದ್ದೇನೆ ಮತ್ತು ಅದಕ್ಕೆ ತಕ್ಕಂತೆ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ. ಆ ಪ್ರಕರಣದಲ್ಲಿ ನಾವು ಈ ಪ್ರಕರಣದ 4 ಮತ್ತು 6 ನೇ ಆರೋಪಿಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಅವರ ಕೊಲೆ ಮಾಡಿದ್ದೇವೆ ಮತ್ತು 1 ನೇ ಆರೋಪಿಯ ಮೇಲೆ ಮತ್ತು ಆ ಪ್ರಕರಣದ ಸಾಕ್ಷಿ ಚನ್ನೇಗೌಡನಿಗೆ ಮಾರಣಾಂತಿಕ ಹಲ್ಲೆ ಮಾಡಿದ್ದೇವೆ ಎಂದು ನಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ ಎಂದರೆ ಸರಿ.

2. ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮದ್ದೂರು ವೃತ್ತ ನಿರೀಕ್ಷಕರು ನನ್ನನ್ನು ದಿನಾಂಕ 29.12.2016 ರಂದು ನನ್ನನ್ನು ವಶಕ್ಕೆ ಪಡೆದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಡಿ ವೈ ಎಸ್ ಪಿ, ಥಾಮಸ್ ನನ್ನನ್ನು ಅರೆಸ್ಟ್ ಮಾಡಿದ್ದಾರೆ. ಸದರಿ ಡಿ ವೈ ಎಸ್ ಪಿ, ಥಾಮಸ್ ಎಸ್ ಸಿ ನಂ.82/2017 ರಲ್ಲಿ ಯಾವುದೇ ತನಿಖೆ ನಡೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವೃತ್ತ ನಿರೀಕ್ಷಕರೂ ಕೂಡ ತನಿಖೆ ನಡೆಸಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ನಾನು ಸುಮಾರು 60 ದಿನ ನ್ಯಾಯಾಂಗ

ಬಂಧನದಲ್ಲಿದ್ದೆ. ಆ ಪ್ರಕರಣದಲ್ಲಿ ನನ್ನನ್ನು ಮೊಲಹನ್ ಪಟೇಲ್ ಎಂಬ ಸಬ್ ಇನ್ಸ್ ಪೆಕ್ಟರ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನನ್ನನ್ನು ಗೆಜ್ಜಲಗೆರೆ ಬಳಿಯ A2B ಹೊಟೇಲ್ ಬಳಿ ವಶಕ್ಕೆ ಪಡೆದಿದ್ದಾರೆ. ನನ್ನನ್ನು ದಸ್ತಗಿರಿ ಮಾಡಿದ ಬಳಿಕ ದಿನಾಂಕ 25.12.2016 ರಂದು ಸಂಜೆ 6.00 ರಿಂದ 6.30 ಮಧ್ಯೆ ತೊಪ್ಪನಹಳ್ಳಿಯ ಅರಳೀಕಟ್ಟೆಯ ಬಳಿ ಘಟನೆ ಹೇಗೆ ನಡೆಯಿತು ಎಂದು ಮತ್ತು ಅಂತ್ಯ ಹೇಗೆ ಆಯಿತು ಎಂದು ತನಿಖಾಧಿಕಾರಿಗೆ ಹೇಳಿದ್ದೇನೆ. ಸಾಕ್ಷಿ ಮುಂದುವರೆದು ಆ ದಿನ ಬೆಳಗ್ಗಿನಿಂದ ಸಂಜೆಯವರೆಗೆ ಏನು ಘಟನೆ ನಡೆಯಿತು ಎಂದೂ ಕೂಡ ಹೇಳಿದ್ದೇನೆ. ನಾನು ಈಗ ನೋಡುತ್ತಿರುವ ಒಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸಾಕ್ಷಿಗೆ ಎರಡು ಆರೋಪಿ ಹೇಳಿಕೆಯ ದೃಢೀಕೃತ ನಕಲುಗಳನ್ನು ತೋರಿಸಿದಾಗ ಸಾಕ್ಷಿ ಆ ಎರಡೂ ಹೇಳಿಕೆಗಳಲ್ಲಿ ಇರುವ ಒಂದೊಂದು ಸಹಿಯನ್ನು ತನ್ನ ಸಹಿ ಎಂದು ಒಪ್ಪಿಕೊಂಡ ಕಾರಣ ಸದರಿ ದಾಖಲೆಗಳನ್ನು ಕ್ರಮವಾಗಿ ನಿಡಿ.3 ಮತ್ತು ನಿಡಿ.4 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಾನು ಖಾಲಿ ಪೇಪರ್ ಗೆ ಸಹಿ ಹಾಕಿದ್ದು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ಅಂಶಗಳು ನಿಡಿ.3 ಮತ್ತು ನಿಡಿ.4 ರಲ್ಲಿ ಇಲ್ಲ ಎಂದರೆ ಸರಿಯಲ್ಲ.

3. ಆ ಪ್ರಕರಣದಲ್ಲಿ ನಾನು ನ್ಯಾಯಾಂಗ ಬಂಧನದಲ್ಲಿ ಇದ್ದಾಗ ಈ ಪ್ರಕರಣದಲ್ಲಿ ಹೇಳಿಕೆ ಪಡೆಯುವ ಸಲುವಾಗಿ ಸಿ ಐ ಡಿ ಯವರು ನನ್ನನ್ನು ವಶಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ದಿನಾಂಕ 09.05.2017 ರಂದು ನಾನು ಆ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದೆ. ದಿನಾಂಕ 09.05.2017 ರಂದು ಸಿ ಐ ಡಿ ಪೊಲೀಸರು ನನ್ನನ್ನು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ವಿಚಾರಣೆ ಮಾಡಿದ್ದಾರೆಂದರೆ ಸರಿ. ನಾನು ಈ ಪ್ರಕರಣದಲ್ಲಿ ದಿನಾಂಕ 09.05.2017 ರಂದು ಪೊಲೀಸರ ಮುಂದೆ "ನಾನು, ಸ್ವಾಮಿ, ಶಿವರಾಜು ಮತ್ತು ಹೇಮಂತ ತೊಪ್ಪನಹಳ್ಳಿಗೆ ಸುಮಾರು 11.00 ಗಂಟೆಯ ಸಮಯಕ್ಕೆ ನನ್ನ ಚಿಕ್ಕಪ್ಪ ಶಿವರಾಮು.ಕೆ.ಟಿ. ರವರ ತೋಟದ ಮನೆಗೆ ಬಂದೆವು. ನಾವುಗಳು ಮನೆಯಲ್ಲಿಯೇ ಇದ್ದೆವು, ಸುಮಾರು ಮದ್ಯಾಹ್ನ 1.00 ಗಂಟೆಯ ಸುಮಾರಿಗೆ ಬೆಂಗಳೂರಿನಿಂದ ಟಿ.ಎಸ್.ಮುತ್ತುರಾಜು ಮತ್ತು ಶಿವು ಎಳನೀರನ್ನು ಸಾಗಿಸುವ 407 ಜೀಪಿನಲ್ಲಿ ಊರಿಗೆ ಬಂದರು. ನಾವೆಲ್ಲರೂ ಮನೆಯಲ್ಲಿ ಕುಳಿತುಕೊಂಡು ಪ್ರಸನ್ನನಿಗೆ ಕುಂಟರಾಜು ಮತ್ತು ಅವರ ಮನೆಯವರು ಹೊಡೆದ ಬಗ್ಗೆ ಚರ್ಚಿಸಿದೆವು" ಎಂದು ಹೇಳಿಕೆ ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ "ನಾವೆಲ್ಲರೂ

ಮನೆಯಲ್ಲಿ ಕುಳಿತುಕೊಂಡು ಪ್ರಸನ್ನನಿಗೆ ಕುಂಟರಾಜು ಮತ್ತು ಅವರ ಮನೆಯವರು ಹೊಡೆದ ಬಗ್ಗೆ ಚರ್ಚಿಸಿದೆವು" ಎಂಬ ಅಂಶವನ್ನು ಹೊರತು ಪಡಿಸಿ ಉಳಿದ ಅಂಶಗಳನ್ನು ಹೇಳಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ದಿನಾಂಕ 09.05.2017 ರಂದು ಈ ಪ್ರಕರಣದಲ್ಲಿ ನೀಡಿದ್ದಾರೆ ಎಂದು ಹೇಳಲಾದ ಹೇಳಿಕೆಯ "ನಾವೆಲ್ಲರೂ ಮನೆಯಲ್ಲಿ ಕುಳಿತುಕೊಂಡು ಪ್ರಸನ್ನನಿಗೆ ಕುಂಟರಾಜು ಮತ್ತು ಅವರ ಮನೆಯವರು ಹೊಡೆದ ಬಗ್ಗೆ ಚರ್ಚಿಸಿದೆವು" ಎಂಬ ಅಂಶವನ್ನು ನಿರಾಕರಿಸಿದ ಕಾರಣ ಅದನ್ನು ನಿಡಿ.5 ಎಂದು ಗುರುತಿಸಲಾಯಿತು. ಆ ದಿನ ನಾವು ಕುಂಟರಾಜು ಮತ್ತು ಅವನ ಕಡೆಯವರ ಮೇಲೆ ನೀಡಿದ ಪೊಲೀಸ್ ದೂರಿನ ಹಿಂಬರಹವನ್ನು ಪಡೆಯಲು ತೊಪ್ಪನಹಳ್ಳಿಗೆ ಬಂದಿದ್ದೆವು. ಆ ಘಟನೆಗೆ ಸಂಬಂಧಿಸಿದಂತೆ ಕುಂಟರಾಜು ಮತ್ತು ಅವನ ಕಡೆಯವರ ಮೇಲೆ ಒಂದು ಪ್ರಕರಣ ದಾಖಲು ಆಗಿದೆ ಎಂದರೆ ಸರಿ. ಕುಂಟರಾಜು ಮತ್ತು ಅವನ ಅಕ್ಕ ಮತ್ತು ತಾಯಿ ಆ ಘಟನೆಗೆ ಸಂಬಂಧಪಟ್ಟಂತೆ ಪ್ರಸನ್ನ ಮತ್ತು ಶಿವರಾಮು, ಜಗದೀಶ, ಪುಟ್ಟಸ್ವಾಮಿ ರವರ ಮೇಲೆ ಕೂಡ ಒಂದು ದೂರು ನೀಡಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅದು ವಜಾ ಆಗಿದೆ ಎಂದು ನುಡಿಯುತ್ತಾರೆ. ಸದರಿ ಕುಂಟರಾಜು ಈ ಪ್ರಕರಣದ 13 ನೇ ಆರೋಪಿ ಎಂದರೆ ಸರಿ. ನಾನು ನ್ಯಾಯಾಂಗ ಬಂಧನದಿಂದ ಬಿಡುಗಡೆಯಾದ ಬಳಿಕ ಸಿಐಡಿ ಪೊಲೀಸರ ಮುಂದೆ ಹೇಳಿಕೆ ನೀಡುವಾಗ ಈ ಪ್ರಕರಣದ ಯಾವ ಆರೋಪಿಗಳು, ಯಾವ ಆಯುಧಗಳಿಂದ ಯಾರ ಯಾರ ಮೇಲೆ ಹಲ್ಲೆ ಮಾಡಿದರು ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

4. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 9 ರಲ್ಲಿ ಹೇಳಿದ "ಮಹೇಂದ್ರ ನನ್ನ ಸಹೋದರರಾದ ಮುತ್ತುರಾಜುವಿಗೆ ಅವ್ಯಾಚ ಪದಗಳಿಂದ ಬೈದನು" ಎನ್ನುವ ವಿಷಯವನ್ನು ನಾನು ಸಿಐಡಿ ಪೊಲೀಸರ ಮುಂದೆ ಅಥವಾ ನಿಡಿ.3 ಮತ್ತು ನಿಡಿ.4 ರಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 11 ರಲ್ಲಿ ಹೇಳಿದ "ಆ ಸಮಯದಲ್ಲಿ .................ಮುತ್ತುರಾಜುವಿನ ಹಣೆ ರಕ್ತಮಯವಾಯಿತು" ಎನ್ನುವ ವಿಷಯವನ್ನು ನಾನು ಸಿಐಡಿ ಪೊಲೀಸರ ಮುಂದೆ ಅಥವಾ ನನ್ನ ಕಲಂ 161 ರ ಹೇಳಿಕೆಯಲ್ಲಿ ಈ ಪ್ರಕರಣದ ತನಿಖಾಧಿಕಾರಿ ಅಥವಾ ಆ ಪ್ರಕರಣದ ತನಿಖಾಧಿಕಾರಿ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

5. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 12, ಪ್ಯಾರಾ 13 ಮತ್ತು ಪ್ಯಾರಾ 14ದ ಮೊದಲನೇ ಸಾಲುಗಳನ್ನು ನಾನು ಈ ಪ್ರಕರಣದ ತನಿಖಾಧಿಕಾರಿ ಅಥವಾ ನನ್ನ ಮೇಲೆ ಇರುವ ಆ ಪ್ರಕರಣದ ತನಿಖಾಧಿಕಾರಿ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

6. ಎಸ್ ಸಿ ನಂ.82/2017ರ ಸಾಕ್ಷಿಗಳಾದ ಗೋಪಾಲ ಅಲಿಯಾಸ್ ಚಿಕ್ಕೋನು ಮತ್ತು ಗಾಯಾಳು ಚನ್ನೇಗೌಡ ಈ ಪ್ರಕರಣದಲ್ಲಿ ಆರೋಪಿಗಳು ಅಲ್ಲ ಎಂದರೆ ಸರಿ. ತೊಪ್ಪನಹಳ್ಳಿಯ ಅರಳೀಕಟ್ಟೆಯ ಬಳಿ 1ನೇ ಆರೋಪಿಯ ಮನೆ ಇದೆ ಎಂದರೆ ಸರಿಯಲ್ಲ. ಆದರೆ ಮೃತ ಮುತ್ತುರಾಜು ಅಲಿಯಾಸ್ ಕೋಟಿ ರವರ ಮನೆ ಅರಳೀಕಟ್ಟೆಯ ಪಕ್ಕ ಇದೆ ಎಂದು ನುಡಿಯುತ್ತಾರೆ. ಆ ದಿನ ಬುಲೆರೋ ವಾಹನ ಮುತ್ತುರಾಜುವಿನ ಮನೆಯ ಪಕ್ಕ ನಿಂತಿತ್ತು ಎಂದರೆ ಸರಿ. ಅದನ್ನು ಅವರು ಎಳನೀರು ವ್ಯಾಪಾರಕ್ಕೆ ಬಳಸುತ್ತಿದ್ದರು ಎಂದರೆ ಸರಿ. ನನ್ನ ಅಣ್ಣ ಚಾಸಾ.1 ಮತ್ತು ಶಿವು ಎಂಬುವವರೂ ಕೂಡ ಬೆಂಗಳೂರಿನಲ್ಲಿ ಎಳನೀರು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಅವರು ಮದ್ದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರದಿಂದ ಎಳನೀರನ್ನು ಬೆಂಗಳೂರಿಗೆ ಸರಬರಾಜು ಮಾಡುತ್ತಿದ್ದರು ಎಂದರೆ ಸರಿ. ಊರಿನಲ್ಲಿ ಯಾವುದೇ ಗಲಾಟೆ ತಂಟೆ ತಕರಾರು ನಡೆದರೂ ಮೃತ ಮುತ್ತುರಾಜು ಮುಂದೆ ನಿಂತು ಬಗೆಹರಿಸುತ್ತಿದ್ದರು ಎಂದರೆ ಸರಿಯಲ್ಲ. ಅರಳೀಕಟೆಟಯ ಬಳಿ ಗಲಾಟೆ ನಡೆದ ಸಂದರ್ಭದಲ್ಲಿ ತೊಪ್ಪನಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟ ಪಂಚಾಯತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದವರು ಗೆದ್ದು ಆಡಳಿತ ನಡೆಸುತ್ತಿದ್ದರು ಎಂದರೆ ಸರಿ. ಆ ಸಮಯಕ್ಕೆ ನನ್ನ ಚಿಕ್ಕಮ್ಮ ಶೋಭಾ ಗೆದ್ದು ಪಂಚಾಯಿತಿ ಅಧ್ಯಕ್ಷರಾಗಿದ್ದರು ಎಂದು ನುಡಿಯುತ್ತಾರೆ. ಎಸ್ ಸಿ ನಂ.82/2017ರಲ್ಲಿ ಸದರಿ ಶೋಭಾ 14ನೇ ಆರೋಪಿ ಎಂದರೆ ಸರಿ.

7. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗಳು ಚಾಸಾ.1 ಮತ್ತು ಚಾಸಾ.2 ರವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾವು 19 ಜನ ಆರೋಪಿಗಳು ಆ ದಿನ ಅರಳೀಕಟ್ಟೆಯ ಬಳಿ ನಿರಾಯುಧರಾಗಿ ಕುಳಿತು ಮಾತನಾಡುತ್ತಿದ್ದ ಈ ಪ್ರಕರಣದ ಆರೋಪಿಗಳ ಮೇಲೆ ಹಲ್ಲೆ ಮಾಡಿ ಅವರಲ್ಲಿ 4 ಮತ್ತು 6ನೇ ಆರೋಪಿಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಮಾಡಿದ್ದೇವೆ ಮತ್ತು 1ನೇ ಆರೋಪಿ ಮತ್ತು ಎಸ್ ಸಿ ನಂ.82/2017ರ ಸಾಕ್ಷಿ ಚನ್ನೇಗೌಡನ ಮೇಲೆ

ಮಾರಣಾಂತಿಕ ಹಲ್ಲೆ ನಡೆಸಿದ್ದೇವೆಂದರೆ ಸರಿಯಲ್ಲ. ನಾನು ಎಸ್ ಸಿ ನಂ.82/2017 ರಲ್ಲಿ ಅಥವಾ ಈ ಪ್ರಕರಣದಲ್ಲಿ, ಈ ಪ್ರಕರಣದ ಚಾಸಾ.17 ಅಶೋಕ ಆ ದಿನ ಅರಳೀಕಟ್ಟೆಯ ಬಳಿ ಹಾಜರಿದ್ದು, ಘಟನೆ ನೋಡಿದ್ದಾರೆಂದು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ಎಸ್ ಸಿ ನಂ.82/2017 ರಲ್ಲಿ ನಾವು ಚಾಸಾ.17 ಅಶೋಕರವರನ್ನು ನಮ್ಮ ಪರವಾಗಿ ಸಾಕ್ಷಿ ವಿಚಾರಣೆ ನಡೆಸಿದ್ದೇವೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆ ಪ್ರಕರಣದಲ್ಲಿ ಚಾಸಾ.17 ರವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದನ್ನು ನೋಡಿದ್ದೇನೆಂದು ನುಡಿಯುತ್ತಾರೆ. ಚಾಸಾ.17 ಅಶೋಕ ಆ ದಿನ ಅರಳೀಕಟ್ಟೆಯ ಬಳಿ ಘಟನೆ ನಡೆದಾಗ ಇರಲೇ ಇಲ್ಲ ಎಂದರೆ ಸರಿಯಲ್ಲ. ನಮ್ಮನ್ನು ಆ ಪ್ರಕರಣದಲ್ಲಿ ಬಜಾವು ಮಾಡಲು ಅವರು ಇದ್ದರು ಎಂದು ಬಿಂಬಿಸಿ, ಆ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಎಂದರೆ ನನಗೆ ಗೊತ್ತಿಲ್ಲ. ಚಾಸಾ.17 ಅಶೋಕರವರನ್ನು ನಾವು ಎಸ್ ಸಿ ನಂ.82/2017 ರಲ್ಲಿ ವಿಚಾರಣೆ ನಮ್ಮ ಪರವಾಗಿ ಮಾಡಿದ್ದರೂ, ಈ ಪ್ರಕರಣದಲ್ಲಿ ಅವರು ಸಾಕ್ಷಿಯಾದರೂ, ಸತ್ಯ ಹೊರಬರುತ್ತದೆ ಎನ್ನುವ ಕಾರಣಕ್ಕೆ ಅವರನ್ನು ಈ ಪ್ರಕರಣದಲ್ಲಿ ನನ್ನ ಸಹೋದರ ವಿಚಾರಣೆಯಿಂದ ಕೈ ಬಿಡುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದ 1 ನೇ ಆರೋಪಿ ತನ್ನ ಮೇಲೆ ಮತ್ತು ತನ್ನ ಸಹೋದರರ ಮೇಲೆ ಆಗುತ್ತಿದ್ದ ಹಲ್ಲೆಯಿಂದ ತಪ್ಪಿಸಿಕೊಳ್ಳಲು ಸ್ವರಕ್ಷಣೆಗೆ ಬಲಪ್ರಯೋಗ ಮಾಡಿದ್ದಾರೆ ವಿನಃ ನಮ್ಮ ಯಾರ ಮೇಲೂ ಹಲ್ಲೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಆ ರೀತಿ ಪ್ರತಿರೋಧಿಸದೇ ಇದ್ದಿದ್ದರೇ ಈ ಪ್ರಕರಣದ ಆರೋಪಿಗಳಿಗೆ ಇನ್ನೂ ಹೆಚ್ಚಿನ ಹಲ್ಲೆಯಾಗುತ್ತಿದುದ್ದರಿಂದ ಅದನ್ನು ತಪ್ಪಿಸಲು ಅವರು ನಮ್ಮ ವಿರುದ್ಧ ಬಲಪ್ರಯೋಗಿಸಿದರು ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗಳು ರಕ್ಷಣಾತ್ಮಕವಾಗಿ ನಮ್ಮ ದಾಳಿಯನ್ನು ತಡೆದಿದ್ದಾರೆಯೇ ವಿನಃ ನಮ್ಮ ವಿರುದ್ಧ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ಈ ಪ್ರಕರಣದ ಆರೋಪಿಗಳ ಕೈಯಲ್ಲಿ ಯಾವುದೇ ಆಯುಧಗಳು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲೆ ಇರುವ ಪ್ರಕರಣದಿಂದ ತಪ್ಪಿಸಿಕೊಳ್ಳಲು ನಾನು ನಡೆದ ಘಟನೆಯನ್ನು ತಿರುಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಪ್ರಕರಣದ ಆರೋಪಿಗಳಾದ ನಾವು ಮತ್ತು ನಮ್ಮ ಪರ ಸಾಕ್ಷಿ ನುಡಿದವರೇ ಆ ದಿನ ಆಕ್ರಮಣಕಾರರಾಗಿ ಹೋಗಿ ಈ ಪ್ರಕರಣದ ಆರೋಪಿಗಳ ಮೇಲೆ ಮತ್ತು ಅವರ ಕಡೆಯವರ ಮೇಲೆ ದಾಳಿ ಮಾಡಿದ್ದೇವೆಂದರೆ ಸರಿಯಲ್ಲ. ಈ ಪ್ರಕರಣದ

ಆರೋಪಿಗಳಿಗೆ ನ್ಯಾಯಾಲಯದಿಂದ ಸಮನ್ಸ್ ಬರುವವರೆಗೆ ಅವರ ಮೇಲೆ ಪ್ರಕರಣ ದಾಖಲು ಆದ ವಿಚಾರ ಗೊತ್ತೇ ಇರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ *5* ಮತ್ತು *7* ರಿಂದ *14* ನೇ ಆರೋಪಿತರ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ**

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.